# ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ

ಬೆಳಗುಂಬ ರಸ್ತೆ, ತುಮಕೂರು - 572 103 - ಫ್ಯಾಕ್ಸ್ : 0816-2255761, ದೂರವಾಣಿ : 2272280

**email : tudatmk2009@yahoo.co.in; website : tuda.co.in.**


ಕ್ರಮಾಂಕ ಟಿಯುಡಿಎ/ನಿವೇಶನಗಳ ಇ-ಹರಾಜು/01/2017-18 ದಿನಾಂಕ : 27-11-2017

## ಇ-ಹರಾಜು ಪ್ರಕಟಣೆ

### ಮೂಲೆ ನಿವೇಶನಗಳ ಇ-ಹರಾಜು ಪ್ರಕಟಣೆ

| | | | |
|---|---|---|---|
| 1) | ಇ-ಹರಾಜಿನ ಪ್ರಕ್ರಿಯೆಯು ಪ್ರಾರಂಭವಾಗುವ ದಿನಾಂಕ ಹಾಗೂ ಸಮಯ | : | ದಿನಾಂಕ: **28-11-2017** ಮುಂಜಾನೆ 11..00 ಗಂಟೆಯಿಂದ |
| 2) | ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಪ್ರೋಸೆಸಿಂಗ್ ಶುಲ್ಕ ಮತ್ತು ಇ.ಎಂ.ಡಿ ಪಾವತಿಸುವ ಕೊನೆಯ ದಿನಾಂಕ ಹಾಗೂ ಸಮಯ | : | ದಿನಾಂಕ: **17-12-2017** ಸಾಯಂಕಾಲ 6.00 ಗಂಟೆವರೆಗೆ |
| 3) | ಇ-ಹರಾಜಿನಲ್ಲಿ ಬಿಡ್ಡ್ ಮಾಡುವ ಸಮಯ | : | ದಿನಾಂಕ : **18-12-2017** ರ ಬೆಳಿಗ್ಗೆ 10.00 ಗಂಟೆಯಿಂದ **27-12-2017** ರ ಸಾಯಂಕಾಲ 6.00 ಗಂಟೆಗೆ ಮುಕ್ತಾಯಗೊಳ್ಳುತ್ತದೆ. (ಡೆಲ್ಟಾ ಟೈಮ್ 5.00 ನಿಮಿಷ) |

### ಇ-ಹರಾಜಿಗಾಗಿ ಮೀಸಲಿಟ್ಟ ನಿವೇಶನಗಳು

**ತುಮಕೂರು ನಗರದ ರಿಂಗ್ ರಸ್ತೆಗೆ ಹೊಂದಿಕೊಂಡಂತೆ ಪ್ರಾಧಿಕಾರವು ಅಭಿವೃದ್ಧಿ ಪಡಿಸಿರುವ ಈಗಾಗಲೇ ಮನೆಗಳು ನಿರ್ಮಾಣಗೊಂಡಿರುವ ಮೆಳೇಕೋಟೆ-ವೀರಸಾಗರ ವಸತಿ ಬಡಾವಣೆಗಳಲ್ಲಿ ಖಾಲಿ ಇರುವ 47 ಮೂಲೆ ನಿವೇಶನಗಳು (ಪ್ರತಿ ಚ.ಅಡಿ ಒಂದಕ್ಕೆ ರೂ.1,960/- ರಂತೆ ಕನಿಷ್ಠ ದರವನ್ನು ನಿಗಧಿಪಡಿಸಲಾಗಿದೆ)**

| ಕ್ರ.ಸಂ. | ನಿವೇಶನ ಸಂಖ್ಯೆ | ನಿವೇಶನದ ಅಳತೆ ಚ.ಅಡಿ.ಗಳಲ್ಲಿ | ಕ್ರ.ಸಂ. | ನಿವೇಶನ ಸಂಖ್ಯೆ | ನಿವೇಶನದ ಅಳತೆ ಚ.ಅಡಿ.ಗಳಲ್ಲಿ | ಕ್ರ.ಸಂ. | ನಿವೇಶನ ಸಂಖ್ಯೆ | ನಿವೇಶನದ ಅಳತೆ ಚ.ಅಡಿ.ಗಳಲ್ಲಿ |
|---|---|---|---|---|---|---|---|---|
| 1 | 928A | 2129.67 | 16 | 821A | 1568.81 | 31 | 651A | 1117.10 |
| 2 | 909A | 1155.62 | 17 | 822A | 496.31 | 32 | 619A | 2937.48 |
| 3 | 910A | 1050.18 | 18 | 753A | 1369.32 | 33 | 604A | 1074.66 |
| 4 | 891A | 1116.89 | 19 | 754A | 3630.59 | 34 | 691A | 984.54 |
| 5 | 929A | 1549.87 | 20 | 947B | 2985.90 | 35 | 664A | 1162.08 |
| 6 | 1571 | 3032.33 | 21 | 948A | 1581.72 | 36 | 665A | 877.10 |
| 7 | 1572 | 4377.17 | 22 | 989A | 1796.38 | 37 | 690A | 793.87 |
| 8 | 1576 | 3563.71 | 23 | 990B | 2147.64 | 38 | 529A | 619.78 |
| 9 | 1161A | 4107.09 | 24 | 1018B | 1805.80 | 39 | 537A | 693.67 |
| 10 | 1162B | 2724.11 | 25 | 1019A | 1768.94 | 40 | 538A | 1155.06 |
| 11 | 1162C | 3590.02 | 26 | 1036A | 1460.00 | 41 | 545A | 1237.24 |
| 12 | 920A | 1416.29 | 27 | 700EA | 1250.85 | 42 | 618A | 1145.54 |
| 13 | 921A | 2240.12 | 28 | 701A | 1638.21 | 43 | 1583 | 2897.94 |
| 14 | 938A | 590.72 | 29 | 677A | 1186.37 | 44 | 1034 | 1506.40 |
| 15 | 788A | 1428.55 | 30 | 678A | 595.78 | 45 | 1035B | 923.21 |
| | | | | | | 46 | 1428 | 1576.45 |
| | | | | | | 47 | 1185A | 2672.78 |

**ಇ-ಹರಾಜಿನ ಷರತ್ತು ಮತ್ತು ನಿಯಮ ನಿಬಂಧನೆಗಳು ಕೆಳಕಂಡಂತಿವೆ:-**

1) ಇ-ಹರಾಜಿನಲ್ಲಿ ಭಾಗವಹಿಸುವವರು ಭಾರತೀಯ ಪ್ರಜೆಯಾಗಿರಬೇಕು.

2) ದಿನಾಂಕ:28-11-2017 ರಿಂದ ಮುಂಜಾನೆ 11.00 ಗಂಟೆಯಿಂದ ದಿನಾಂಕ:17-12-2017 ರ ಸಾಯಂಕಾಲ 6.00 ಗಂಟೆಯೊಳಗಾಗಿ ಪ್ರೋಸೆಸಿಂಗ್ ಶುಲ್ಕ ಮತ್ತು ಇ.ಎಂ.ಡಿ. ಪಾವತಿಸಿ ಸಂಬಂಧಪಟ್ಟ ದಾಖಲೆಗಳನ್ನು ಅಪಲೋಡ್ ಮಾಡತಕ್ಕದ್ದು. ಈ ಹರಾಜಿನಲ್ಲಿ ಬಿಡ್ ಮಾಡುವ ಪ್ರಕ್ರಿಯೆಯ ಸಮಯವನ್ನು ದಿನಾಂಕ 18-12-2017 ರ ಬೆಳಿಗ್ಗೆ

10.00 ಗಂಟೆಯಿಂದ ದಿನಾಂಕ 27-12-2017 ರ ಸಾಯಂಕಾಲ 6.00 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ. ನಿಗಧಿತ ಸಮಯದ ನಂತರ ಪ್ರೋಸೆಸಿಂಗ್ ಶುಲ್ಕ ಮತ್ತು ಇ.ಎಂ.ಡಿ. ಪಾವತಿಸಲು ಮತ್ತು ದಾಖಲೆಗಳನ್ನು ಅಪಲೋಡ್ ಮಾಡಲು ಅವಕಾಶ ಇರುವುದಿಲ್ಲ.

3) ಇ-ಹರಾಜಿನಲ್ಲಿ ಭಾಗವಹಿಸಿ ನಿವೇಶನ ಪಡೆಯಲು ಅನುಸರಿಸಬೇಕಾದ ಕ್ರಮದ ಬಗ್ಗೆ ಮಾಹಿತಿ ಬೇಕಾದಲ್ಲಿ eproc.karnataka.gov.in ಗೆ ಲಾಗಿನ್ ಆಗಿ ಮುಖ ಪುಟದ ವಿಭಾಗದಲ್ಲಿ ಲಭ್ಯವಿರುವ Simplified e-Auction user guide ಅನ್ನು Download ಮಾಡಿಕೊಳ್ಳಬಹುದಾಗಿದೆ.

4) ಇ-ಹರಾಜಿನಲ್ಲಿ ಭಾಗವಹಿಸುವವರು ಫಾರ್ಮ ನಮೂನೆ-1 ನ್ನು ಡೌನ್‌ಲೋಡ್ ಮಾಡಿಕೊಂಡು ಅದರಲ್ಲಿ ಕೇಳಿರುವ ಅಂಚೆ ವಿಳಾಸ, ಇ-ಮೇಲ್, ದೂರವಾಣಿ ಸಂಖ್ಯೆ ಮತ್ತು ಇತ್ತೀಚಿನ ಭಾವಚಿತ್ರ (Photo) ಹಾಗೂ ಮಾದರಿ ಸಹಿಗಳು (Specimen Signature) ಮಾಹಿತಿಯನ್ನು ಭರ್ತಿ ಮಾಡಿ ಗೆಜೆಟೆಡ್ ಅಧಿಕಾರಿ/ನೋಟರಿಯಿಂದ ದೃಢೀಕರಿಸಿ ಸ್ಕ್ಯಾನ್ ಮಾಡಿ ಅಪಲೋಡ್ ಮಾಡತಕ್ಕದ್ದು.

5) ವಿಳಾಸದ ಸಾಬೀತಿಗಾಗಿ ಎ) ಮತದಾರರ ಗುರುತಿನ ಚೀಟಿ, ಬಿ) ಆಧಾರ ಕಾರ್ಡ್, ಸಿ) ವಾಹನ ಚಾಲನೆಯ ಪರವಾನಿಗಿ, ಡಿ) ಪಾಸ್‌ಪೋರ್ಟ್. ಇ) ಪಡಿತರ ಚೀಟಿ ಇವುಗಳಲ್ಲಿ ಯಾವುದಾದರು ಒಂದರ ಪ್ರತಿಯನ್ನು ಗೆಜೆಟೆಡ್ ಅಧಿಕಾರಿ/ನೋಟರಿಯಿಂದ ದೃಢೀಕರಿಸಿ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡತಕ್ಕದ್ದು.

6) ಇ.ಎಂ.ಡಿ ಮೊತ್ತವನ್ನು ಈ ಕೆಳಗೆ ತಿಳಿಸಿದ ಅಳತೆಗಳ ಅನುಸಾರವಾಗಿ ಇ-ಪ್ರೋಕ್ಯೂರಮೆಂಟ್ ಮೂಲಕ ಪಾವತಿಸತಕ್ಕದ್ದು.

| ನಿವೇಶನಗಳ ಅಳತೆ | ಪಾವತಿಸಬೇಕಾದ ಇ.ಎಂ.ಡಿ ಮೊತ್ತ |
|---|---|
| 2000 ಚದರ ಅಡಿ ಮೇಲ್ಪಟ್ಟು | ರೂ.2,00,000 |
| 1200 ರಿಂದ 2000 ಚದರ ಅಡಿ | ರೂ.1,50,000 |
| 1200 ಚದರ ಅಡಿ | ರೂ.1,00,000 |

7) ಇ-ಹರಾಜಿನ ಪ್ರಕ್ರಿಯೆಯಲ್ಲಿ ಭಾಗವಹಿಸುವವರು ಇಪೋರ್ಟಲ್‌ನಲ್ಲಿ ಲಾಗಿನ್ ಮಾಡಲು ನೊಂದಣಿ ಮಾಡತಕ್ಕದ್ದು ಈ ಸಂದರ್ಭದಲ್ಲಿ ತಮ್ಮ ಬ್ಯಾಂಕಿನ ಖಾತೆ ಸಂಖ್ಯೆ ಐ.ಎಫ್.ಎಸ್.ಸಿ ಕೋಡ್ ಹಾಗೂ ಇನ್ನಿತರ ಮಾಹಿತಿಗಳ ವಿವರಗಳನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು. ಯಾವುದೇ ತಾಂತ್ರಿಕ ತೊಂದರೆಯಾದಲ್ಲಿ ಇ-ಪ್ರೋಕ್ಯೂರ್‌ಮೆಂಟ್ ಸಹಾಯ ಕೇಂದ್ರ ಬೆಂಗಳೂರು (e-procurement help desk) ದೂರವಾಣಿ ಸಂಖ್ಯೆ 080-23010900/23010901 ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ.

8) ಅನಿವಾಸಿ ಭಾರತೀಯರಾಗಿದ್ದಲ್ಲಿ (N.R.I) ಎಂಬೆಸ್ಸಿ ಕಛೇರಿಯಿಂದ ದಾಖಲೆಗಳನ್ನು ದೃಢೀಕರಿಸಿ ಸ್ಕ್ಯಾನ್ ಮಾಡಿ ಅಪಲೋಡ್ ಮಾಡತಕ್ಕದ್ದು.

9) ಪ್ಯಾನ್‌ಕಾರ್ಡ್ ಇದ್ದಲ್ಲಿ ಪ್ರತಿಯನ್ನು ಗೆಜೆಟೆಡ್ ಅಧಿಕಾರಿ/ನೋಟರಿಯಿಂದ ದೃಢೀಕರಿಸಿ ಸ್ಕ್ಯಾನ್ ಮಾಡಿ ಅಪಲೋಡ್ ಮಾಡತಕ್ಕದ್ದು.

10) ನಿವೇಶನಗಳಿಗೆ ಕನಿಷ್ಠ ಬಿಡ್ ಬದಲಾವಣೆ ಮೊತ್ತ ರೂ.20,000/- ಗಳಾಗಿರುತ್ತದೆ.

11) ಪ್ರತಿ ನಿವೇಶನ ಹರಾಜಿನಲ್ಲಿ ಕನಿಷ್ಠ ಎರಡು ಜನ ಭಾಗವಹಿಸಬೇಕಾಗಿರುತ್ತದೆ

12) ಮೂಲೆ, ಬಿಡಿ, ನಿವೇಶನಗಳ ಯಶಸ್ವಿ ಬಿಡ್‌ದಾರರು ಬಿಡ್ ಅಂಗೀಕೃತಗೊಂಡಿರುವ ಬಗ್ಗೆ ಇ-ಪೋರ್ಟಲ್ ಮುಖಾಂತರವೇ ಪರಿಶೀಲಿಸಿಕೊಂಡು ಇ-ಹರಾಜು ಮುಕ್ತಾಯಗೊಂಡು ಬಿಡ್ಡ್ ಅಂಗೀಕೃತಗೊಂಡ ಅವಧಿಯ ನಂತರದ 02 ದಿವಸದ ಒಳಗಾಗಿ ಬಿಡ್‌ನ ಪೂರ್ಣ ಮೊಬಲಗಿನ ಪೈಕಿ ಶೇಕಡ 25 ರಷ್ಟು ಮೊತ್ತವನ್ನು ಇ.ಎಂ.ಡಿ ಸೇರಿಸಿ **"ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು"** ಇವರ ಹೆಸರಿನಲ್ಲಿ ಯಾವುದೇ ರಾಷ್ಟೀಕೃತ ಬ್ಯಾಂಕಿನಿಂದ ಡಿ.ಡಿ.ಪಡೆದು ಅರ್ಜಿಯೊಂದಿಗೆ ಪ್ರಾಧಿಕಾರಕ್ಕೆ ಸಲ್ಲಿಸಬೇಕು.

13) ಮೂಲೆ, ಬಿಡಿ, ನಿವೇಶನಗಳ ಯಶಸ್ವಿ ಬಿಡ್ಡುದಾರರು ಶೇಕಡ 25 ಭಾಗ ಪಾವತಿ ಮಾಡಿದ ನಂತರ ಬಾಕಿ ಉಳಿದ ಶೇಕಡ 75 ಭಾಗವನ್ನು ಪ್ರಾಧಿಕಾರದಿಂದ ಸೂಚನೆ ಪತ್ರ ಸ್ವೀಕರಿಸಿದ (45) ದಿನಗಳ ಒಳಗಾಗಿ **"ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು"** ಇವರ ಹೆಸರಿನಲ್ಲಿ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ.ಪಡೆದು ಅರ್ಜಿಯೊಂದಿಗೆ ಪ್ರಾಧಿಕಾರಕ್ಕೆ ಸಲ್ಲಿಸಬೇಕು.

14) ಮೂಲೆ, ಬಿಡಿ, ನಿವೇಶನಗಳ ಯಶಸ್ವಿ ಬಿಡ್ಡುದಾರರು ಶೇಕಡ 25 ರಷ್ಟು ಬಿಡ್ಡು ಮೊತ್ತವನ್ನು ನಿಗಧಿತ ಅವಧಿಯಲ್ಲಿ ಪಾವತಿಸದೇ ಇದ್ದಲ್ಲಿ ಸದರಿಯವರ ಪಾವತಿಸಿರುವ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

15) ಹರಾಜಿನ ಸೂಚನಾ ಪತ್ರ ಪಡೆದ ದಿನಾಂಕದಿಂದ 45 ದಿವಸದೊಳಗೆ ಬಿಡ್‌ದಾರರು ನಿವೇಶನದ ಬಾಕಿ ಹಣ ಪಾವತಿ ಮಾಡತಕ್ಕದ್ದು. ಪಾವತಿಸಲಾಗುವ ಬಿಡ್ ಮೊತ್ತವನ್ನು 45 ದಿವಸಗಳೊಳಗಾಗಿ ಬಡ್ಡಿ ರಹಿತವಾಗಿ ಪಾವತಿಸಬಹುದಾಗಿದ್ದು, ನಂತರದ 90 ದಿನಗಳ ಅವಧಿಯಲ್ಲಿ ಪಾವತಿಸಲಾಗುವ ಮೊತ್ತಕ್ಕೆ ವಾರ್ಷಿಕ ಶೇಕಡ 18 ರಷ್ಟು ಬಡ್ಡಿ ದರವನ್ನು ಹಾಗೂ 135 ದಿನಗಳ ನಂತರ ಪಾವತಿಸಲಾಗುವ ಮೊತ್ತಕ್ಕೆ ವಾರ್ಷಿಕ ಶೇಕಡ 21 ರಷ್ಟು ಬಡ್ಡಿಯೊಂದಿಗೆ ಪ್ರಾಧಿಕಾರದ ಲಿಖಿತ ಅನುಮತಿಯನ್ನು ಪಡೆದು ಬಿಡ್‌ದಾರರು ಹಣವನ್ನು ಪಾವತಿಸಬೇಕಾಗಿರುತ್ತದೆ. ಒಂದು ವೇಳೆ ಈ ಪೂರ್ಣ ಅವಧಿಯಲ್ಲಿ ನಿವೇಶನದ ಬಾಕಿ ಮೊತ್ತ ಪಾವತಿಸದೇ ಇದ್ದಲ್ಲಿ ನಿವೇಶನ ಪಡೆದವರು ಪಾವತಿ ಮಾಡಿದ ಮುಂಗಡ ಠೇವಣಿ ಹಾಗೂ ಶೇಕಡ 25% ರಷ್ಟು ಮೊತ್ತ ಪಾವತಿ ಮಾಡಿದ್ದನ್ನು ಮುಟ್ಟುಗೋಲು ಹಾಕಿಕೊಂಡು ಹರಾಜಾದ ನಿವೇಶನವನ್ನು ರದ್ದುಪಡಿಸಲಾಗುವುದು.

16) ಅಂತಿಮವಾಗಿ ನಿವೇಶನ ಬಿಡ್ಡುದಾರರಿಗೆ ನಿವೇಶನ ಹಸ್ತಾಂತರಿಸುವ ಸಮಯದಲ್ಲಿ ಅಳತೆ ಹೆಚ್ಚು / ಕಡಿಮೆ ಬಂದಲ್ಲಿ ಬಿಡ್ ಆಗಿರುವ ದರದಲ್ಲಿಯೇ ಹೆಚ್ಚುವರಿ ಮೊತ್ತವನ್ನು ಪಾವತಿಸುವ / ಹಿಂತಿರುಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

17) ಬ್ಯಾಂಕ್ ಸೇವಾ ಶುಲ್ಕ ಇತ್ಯಾದಿಗಳನ್ನು ಬಿಡ್ಡುದಾರರೇ ಭರಿಸತಕ್ಕದ್ದು.

18) ನಿವೇಶನಗಳ ಅಳತೆ ಮತ್ತು ಸಂಖ್ಯೆಯ ವಿವರಣೆಯನ್ನು eproc.karnataka.gov.in ಲಾಗಿನ್ ಆಗಿ ಪಡೆಯಬಹುದು.

19) ನಿವೇಶನಗಳೂ ಎಲ್ಲಿ ಹೇಗಿವೆಯೋ ಹಾಗೆಯೇ ಹರಾಜಿಗೆ ಒಳಪಡಿಸಲಾಗುವುದು.

20) ಈ ಹರಾಜನ್ನು ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ಹಾಗೂ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಮೂಲೆ ಮತ್ತು ವಾಣಿಜ್ಯ ನಿವೇಶನಗಳ ವಿಲೇವಾರಿ ನಿಯಮ 1991 ರ ರೀತ್ಯಾ ಕ್ರಮವಹಿಸಲಾಗುವುದು.

21) ಹರಾಜಿನಲ್ಲಿ ಬಂದ ದರಕ್ಕೆ ನಿವೇಶನವನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರವು ಹೊಂದಿರುತ್ತದೆ.

22) ಹರಾಜಿನ ನಿವೇಶನಗಳಿಗೆ ಸಂಬಂಧಿಸಿದ ಎಲ್ಲಾ ಕಾನೂನು ಪ್ರಕರಣಗಳು ತುಮಕೂರು ನ್ಯಾಯಾಲಯದ / ಬೆಂಗಳೂರು ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತದೆ.

23) ಇ-ಹರಾಜಿನ ಪ್ರೋಸೆಸಿಂಗ್ ಫೀಸನ್ನು ಇ-ಪ್ರೋಕ್ಯೂರಮೆಂಟ್ ಮೂಲಕ ಪಾವತಿಸತಕ್ಕದ್ದು. ಯಾವುದೇ ಕಾರಣಕ್ಕೂ ಪ್ರೋಸೆಸಿಂಗ್ ಫೀಸನ್ನು ಹಿಂತಿರುಗಿಸಲಾಗುವುದಿಲ್ಲ.

24) ಯಾವುದೇ ಬದಲಾವಣೆಗಳಿದ್ದಲ್ಲಿ ವೆಬ್‌ಸೈಟ್ ಮೂಲಕ ಮಾತ್ರವೇ ಪ್ರಕಟಿಸಲಾಗುವುದು.

25) ಹರಾಜಿನಲ್ಲಿ ವಿಫಲರಾದವರಿಗೆ ಹರಾಜು ಅಂತಿಮಗೊಳಿಸಿದ ನಂತರ ಇ.ಎಂ.ಡಿ ಮೊತ್ತವನ್ನು eproc.karnataka.gov.in ರವರು ಹಿಂದಿರುಗಿಸಲು ಕ್ರಮವಹಿಸುತ್ತಾರೆ.

26) ಇ-ಹರಾಜಿನ ಕೊನೆಯ ಕ್ಷಣದಲ್ಲಿ ಬರುವಂತಹ ಬಿಡ್ಡುಗಳಿಗೆ ಡೆಲ್ಟಾ ಟೈಮ್ 5.00 ನಿಮಿಷಗಳ ಕಾಲ ವಿಸ್ತರಣೆಯಾಗುತ್ತದೆ. ಉದಾ : ಇ-ಹರಾಜಿನಲ್ಲಿ ಪಾಲ್ಗೊಳ್ಳಲು, ಆಸಕ್ತಿ ವ್ಯಕ್ತಪಡಿಸಲು ಅಂತಿಮ ಸಮಯ 6.00 ಎಂದಿದ್ದಲ್ಲಿ ಅದನ್ನು 5.57 ಗಂಟೆಗಳಿಂದ ಪ್ರಾರಂಭಿಸಿ 6.02 ಗಂಟೆಗಳವರೆಗೆ ಅವಧಿ ವಿಸ್ತರಣೆಯಾಗುತ್ತದೆ ಮತ್ತೆ ಯಾರಾದರೂ ಬಿಡ್ಡದಾರರು ಬಿಡ್ಡನ್ನು 6.01 ಗಂಟೆ ಮಾಡಿದ್ದಲ್ಲಿ 6.06 ವರೆಗೆ ಅವಧಿ ವಿಸ್ತರಣೆಯಾಗುತ್ತದೆ.

27) ಇ-ಹರಾಜಿನ ಪ್ರಕ್ರಿಯೆಯಲ್ಲಿ ತಾಂತ್ರಿಕ ತೊಂದರೆಯಾದಲ್ಲಿ ಪ್ರಾಧಿಕಾರವು ಹೊಣೆಯಾಗಿರುವುದಿಲ್ಲ.

ಇ-ಹರಾಜಿನ ಷರತ್ತು, ನಿಯಮ, ನಿಬಂಧನೆಗಳು ಮತ್ತು ಸ್ಥಳ ಸೂಚಿ ನಕ್ಷೆಯ, ವಿನ್ಯಾಸ ನಕ್ಷೆಯ ವಿವರಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ : eproc.karnataka.gov.in ನಲ್ಲಿ Tumkur Urban Development Authority Department ನಲ್ಲಿ ಪರಿಶೀಲಿಸಬಹುದು ಹಾಗೂ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಹಾಗೂ website:tuda.co.in ರಲ್ಲಿಯೂ ಮಾಹಿತಿ ಪಡೆಯಬಹುದಾಗಿರುತ್ತದೆ.

| | |
|---|---|
| ಸಹಿ/- | ಸಹಿ/- |
| ಅಧ್ಯಕ್ಷರು | ಆಯುಕ್ತರು |
| ನಗರಾಭಿವೃದ್ಧಿ ಪ್ರಾಧಿಕಾರ, | ನಗರಾಭಿವೃದ್ಧಿ ಪ್ರಾಧಿಕಾರ, |
| ತುಮಕೂರು | ತುಮಕೂರು |